**ಕಥೆ**



**ಲಿಂಗರಾಜ ಸೊಟ್ಟಪ್ಪನವರ**

ಕಲೆ: ಎಸ್.ವಿ. ಹೂಗಾರ್

# ಪ್ರಾಯಶ್ಚಿತ್ತ



ಅವಳ ವಿಳಾಸ ಹುಡುಕಿಕೊಂಡು ಬಂದಿದ್ದ ನನಗೆ ಶಾಕ್ರೀ ಈ ಊರಲ್ಲಿ ಇಲ್ಲವೆಂಬುದು ತಿಳಿದು ನಿರಾಸೆಯಾಯಿತು. ಇಲ್ಲಿ ಬಹಳ ವರ್ಷಗಳಿಂದ ಇದ್ದಳೆಂದು ಮನೆಯವರು ಹೇಳಿ ಕಳಿಸಿದ್ದರು. ಅವಳ ಬಗ್ಗೆ ನನಗೆ ಕಕ್ಕುಲಾತಿ ಇರುವ ಬಗ್ಗೆ ತಿಳಿದಿದ್ದ ಮನೆಯ ಜನರು ಶಾಕ್ರೀಯ ಮನವೊಲಿಸಿ ಒಪ್ಪಿಸಿ ಕರೆತರಲು ನಾನೆ ಸೂಕ್ತ ವ್ಯಕ್ತಿ ಎಂದು ತೀರ್ಮಾನಿಸಿದ ಹಾಗಿತ್ತು. ಶಾಕ್ರೀಯ ಮನವೊಲಿಸುವುದು ಅಷ್ಟು ಸುಲಭವಾಗಿರಲಿಲ್ಲ.

ಇವರ ಮನೆಯ ಹೊಸಿಲು ಇನ್ನೆಂದೂ ತುಳಿಯುವದಿಲ್ಲ... ಎಂದು ನಿರ್ಧರಿಸಿ ಹೋಗಿದ್ದಳು ಶಾಕ್ರೀ. ಅವಳು ನನ್ನ ವಿನಂತಿಯನ್ನು ನಿರಾಕರಿಸಲಾರಳು ಎಂಬುದು ಮನೆಯವರಿಗೆ ಗೊತ್ತಿತ್ತು.